ಹಿಂದುಳಿದ ಜಾತಿ ವಿದ್ಯಾರ್ಥಿಗಳ ಹಲವಾರು ವಿನಾಯ್ತಿ ಯೋಜನೆಗಳ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 157 (319)
ಸದಸ್ಯರ ಹೆಸರು : ಶ್ರೀ ಅಂಗಾರ ಎಸ್ (ಸುಳ್ಯ)
ಉತ್ತರಿಸುವ ಸಚಿವರು : ಶ್ರೀ. ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು)

ಪ್ರಶ್ನೆಗಳು:–

ಅ) ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಜಾತಿ ಸಮುದಾಯದ ವಿದ್ಯಾರ್ಥಿಗಳಿಗೆ ಅವರ ವ್ಯಾಸಂಗಕ್ಕಾಗಿ ಸರ್ಕಾರವು ನೀಡುತ್ತಿರುವ ವಿವಿಧ ರೀತಿಯ ಶುಲ್ಕ ವಿನಾಯ್ತಿ, ಶುಲ್ಕ ಮರುಪಾವತಿ ಹಾಗೂ ವಿದ್ಯಾರ್ಥಿವೇತನ (ಸ್ಕಾಲರ್‌ಷಿಪ್) ಸೌಲಭ್ಯಗಳ್ಯಾವವು?

ಆ) ಈ ನಿಟ್ಟಿನಲ್ಲಿ ಹಿಂದುಳಿದ ವರ್ಗಗಳ ಇಲಾಖೆ ಅಥವಾ ಹಿಂದುಳಿದ ಅಭಿವೃದ್ಧಿ ನಿಗಮದ ವತಿಯಿಂದ ಈ ವರ್ಗದ, ಜಾತಿಯ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವ್ಯಾಸಂಗ ಶುಲ್ಕ ವಿನಾಯ್ತಿ ಹಾಗೂ ವಿದ್ಯಾರ್ಥಿವೇತನ ಪ್ರಮಾಣ ಎಷ್ಟು; ಮೆಟ್ರಿಕ್ ನಂತರದ ವ್ಯಾಸಂಗದ ವಿವಿಧ ಕೋರ್ಸ್‌ಗಳವಾರು ನೀಡುತ್ತಿರುವ ವಿದ್ಯಾರ್ಥಿ ವೇತನವಾರು, ಜಿಲ್ಲಾವಾರು ಸಂಪೂರ್ಣ ವಿವರ ಒದಗಿಸುವುದು;

ಇ) ವಿದ್ಯಾರ್ಥಿವೇತನ ಸೌಲಭ್ಯ ಹಾಗೂ ಶುಲ್ಕ ವಿನಾಯ್ತಿ ಸೌಲಭ್ಯ ಪಡೆಯಲು ನಿಗದಿಪಡಿಸಿರುವ ಮಾರ್ಗಸೂಚಿ ಮಾನದಂಡಗಳೆನು? ಜಾತಿ ಆದಾಯ ಪ್ರಮಾಣ ಪತ್ರದ ವಾರ್ಷಿಕ ಆದಾಯಮಿತಿ ಎಷ್ಟು ಮೊತ್ತಕ್ಕೆ ನಿಗದಿಪಡಿಸಲಾಗಿದೆ? ಈ ಪ್ರಮಾಣ ಪತ್ರದ ಚಾಲ್ತಿ ಅವಧಿ ಎಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ? (ಈ ಬಗ್ಗೆ ಇರುವ ಗೊಂದಲಗಳನ್ನು ನಿವಾರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ); ವಿವರ ಒದಗಿಸುವುದು.

ಈ) ಅದೇ ರೀತಿ ಸದರಿ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ಮಿತಿಯನ್ನು (ಕೆನೆಪದರು ನೀತಿಯಂತೆ) ರೂ. 2 ಲಕ್ಷದಿಂದ ಕೇಂದ್ರ

ಸರ್ಕಾರದ ಮಾದರಿಯಲ್ಲಿ ರೂ. 4 ಲಕ್ಷಕ್ಕೆ ವಿಸ್ತರಿಸುವ ಕುರಿತು ಸರ್ಕಾರದ ನಿಲುವೇನು? ಸ್ಪಷ್ಟಪಡಿಸುವುದು;

ಊ) ಉನ್ನತ ವ್ಯಾಸಂಗ, ವಿದೇಶ ವ್ಯಾಸಂಗಕ್ಕೆ ನೀಡುವ ವಿದ್ಯಾರ್ಥಿ ವೇತನ (ಸ್ಕಾಲರ್‌ಷಿಪ್) ಪಡೆಯುವ ಸಲುವಾಗಿ ಹಾಗೂ ಶುಲ್ಕ ಮರುಪಾವತಿಗೆ ಅರ್ಜಿ ಸಲ್ಲಿಸಲು ಇರಬೇಕಾದ ಶೇ. 50 ರಿಂದ ಶೇ. 60 ಅಥವಾ ಶೇ. 55 ಕ್ಕೆ ಸಡಿಲಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಇದ್ದಲ್ಲಿ, ಇದನ್ನು ಅನುಷ್ಠಾನಗೊಳಿಸಲು ಬೇಕಾದ ಸಮಯವೆಷ್ಟು?

ಋ) ಈ ಎಲ್ಲಾ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ವಿದೇಶಗಳಲ್ಲಿ ವಿವಿಧ ಕೋರ್ಸ್‌ಗಳ ವಿದೇಶ ವ್ಯಾಸಂಗ ಮಾಡುತ್ತಿರುವ ರಾಜ್ಯದ ವಿದೇಶಗಳಲ್ಲಿರುವ ವಿದ್ಯಾರ್ಥಿಗಳ ಪೂರ್ಣ ವಿವರಗಳನ್ನು ಜಿಲ್ಲಾವಾರು ಮಾಹಿತಿ ಒದಗಿಸುವುದು; ಇದಕ್ಕೆ ನೋಂದಾಯಿಸುವ ಹಾಗೂ ಆಯ್ಕೆ ಮಾಡುವ ಪ್ರಕ್ರಿಯೆ ಮಾನದಂಡಗಳೇನು? ಹೇಗೆ ವಿವರ ಸಲ್ಲಿಸುವುದು;

ಉತ್ತರಗಳು:–

ಅ) ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಜಾತಿ ಸಮುದಾಯದ ವಿದ್ಯಾರ್ಥಿಗಳಿಗೆ ಅವರ ವ್ಯಾಸಂಗಕ್ಕಾಗಿ ಶುಲ್ಕ ಮರುಪಾವತಿ ಹಾಗೂ ವಿದ್ಯಾರ್ಥಿವೇತನದ ಸೌಲಭ್ಯಗಳಿವೆ. ಶುಲ್ಕ ವಿನಾಯ್ತಿಯಲ್ಲಿ ಪರೀಕ್ಷಾ, ಬೋಧನಾ ಮತ್ತು ಪ್ರಯೋಗಾಲಯ ಶುಲ್ಕಗಳಿದ್ದು, ಇದರಲ್ಲಿ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ ಮತ್ತು ಕ್ರೀಡಾ ಶುಲ್ಕಗಳಿಂದಲೂ ವಿನಾಯಿತಿ ಇದೆ.

ವಿದ್ಯಾರ್ಥಿವೇತನದಲ್ಲಿ ಮೆಟ್ರಿಕ್–ಪೂರ್ವ (5 ರಿಂದ 10 ನೇ ತರಗತಿ) ಹಾಗೂ ಮೆಟ್ರಿಕ್ ನಂತರದ (ಪಿ.ಯು.ಸಿ ಯಿಂದ ಸ್ನಾತಕೋತ್ತರ) ದವರೆಗೆ ವಿದ್ಯಾರ್ಥಿವೇತನ ನೀಡುವ ಸೌಲಭ್ಯವಿರುತ್ತದೆ. ಅದರಂತೆ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿಯೂ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್

ನಂತರದ ವಿದ್ಯಾರ್ಥಿವೇತನ ನೀಡುವ ಸೌಲಭ್ಯವಿರುತ್ತದೆ.

ಆ) (i) ಹಿಂದುಳಿದ ವರ್ಗಗಳ ಇಲಾಖಾ ವತಿಯಿಂದ ಈ ವರ್ಗದ ಜಾತಿಯ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಶುಲ್ಕ ಮರುಪಾವತಿ ಪ್ರಮಾಣ (ಶುಲ್ಕದ ದರಗಳು) ಅನುಬಂಧ–1ರಲ್ಲಿ ತಯಾರಿಸಿ ಲಗತ್ತಿಸಿದೆ.

(ii) ಹಿಂದುಳಿದ ವರ್ಗಗಳ ಇಲಾಖಾ ವತಿಯಿಂದ ಈ ವರ್ಗದ ಜಾತಿಯ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವಿದ್ಯಾರ್ಥಿ ವೇತನ ಪ್ರಮಾಣ (ದರ) ಈ ಕೆಳಗಿನಂತಿರುತ್ತದೆ.

(a) ಕೇಂದ್ರ ಪುರಸ್ಕೃತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

ತರಗತಿ	ವಿದ್ಯಾರ್ಥಿ ವೇತನ/ ದರ
1 ರಿಂದ 5 ನೇ	ರೂ. 250 (ಹತ್ತು ತಿಂಗಳಿಗೆ)
6 ರಿಂದ 8ನೇ	ರೂ. 400 (ಹತ್ತು ತಿಂಗಳಿಗೆ)
9 ರಿಂದ 10ನೇ	ರೂ. 500 (ಹತ್ತು ತಿಂಗಳಿಗೆ)

(b) ರಾಜ್ಯ ಸರ್ಕಾರ ಮೆಟ್ರಿಕದದ ಪೂರ್ವ ವಿದ್ಯಾರ್ಥಿವೇತನ

ತರಗತಿ	ವಿದ್ಯಾರ್ಥಿ ವೇತನ/ ದರ
5 ರಿಂದ 7 ನೇ	ರೂ. 75.00 (ವಾರ್ಷಿಕ)
8 ರಿಂದ 10ನೇ	ರೂ. 100.00 (ವಾರ್ಷಿಕ

(a) ಕೇಂದ್ರ ಪುರಸ್ಕೃತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ		(b) ರಾಜ್ಯ ಸರ್ಕಾರ ಮೆಟ್ರಿಕದದ ಪೂರ್ವ ವಿದ್ಯಾರ್ಥಿವೇತನ		
Group A:	ರೂ. 3500 (ಹತ್ತು ತಿಂಗಳಿಗೆ)	1. ಪಿಯುಸಿ ಪದವಿ ಹಂತದ ಎಲ್ಲಾ ಕೋರ್ಸ್‌ಗಳಿಗೆ	ರೂ. (ವಾರ್ಷಿಕ)	300.00
1. Degree and Post Graduate level courses including, M.Phill, Ph.D, and Post Doctoral research in Medicine. Engineering, Technology, Planning, Architecture, Design, Fashion, Technology, Agriculture, Veterinary & Allied, Post Graduate Diploma Courses, L.L.M.		2. ಎಲ್‌ಎಲ್‌ಬಿ	ರೂ. (ವಾರ್ಷಿಕ)	400.00
		3. ಎಲ್ಲಾ ಕೋರ್ಸಿನ ಸ್ನಾತಕೋತ್ತರ ಪದವಿ, ವೈದ್ಯಕೀಯ/ ತಾಂತ್ರಿಕ ಶಿಕ್ಷಣದ ಕೋರ್ಸ್ ಹಾಗೂ ಇತರೆ ಉನ್ನತ ವ್ಯಾಸಂಗದ ಕೋರ್ಸ್‌ಗಳಿಗೆ	ರೂ. (ವಾರ್ಷಿಕ)	500.00
Group B:	ರೂ. 3350 (ಹತ್ತು ತಿಂಗಳಿಗೆ)			
2. Graduate/ Post Graduate courses leading to Degree,				

Diploma, Pharmacy, Nursing, LLB, Para-medical, Mass Communication, Hotel Management, Tourism/ Hospitality Management, Commercial Art, Financial Services.	
3. Post Graduate courses not covered under Group A e.g. MA/ M.Sc./ M.Com/ M.ed.,	
Group C:	ರೂ. 2100 (ಹತ್ತು ತಿಂಗಳಿಗೆ)
4. All other courses leading to a Graduate degree not convered under Group A & B e.g. BA/ B.Sc./ B.Com. etc.	
Group D:	ರೂ. 1600 (ಹತ್ತು ತಿಂಗಳಿಗೆ)
5. All post-matriculation level non-degree courses for which entrance qualification is High School (Class X), e.g, senior secondary certificate (class XI and XII); both general and vocational stream, ITI courses, 3 year diploma courses in Polytechnics, etc.	

(i) 2010–11ನೇ ಹಾಗೂ 2011–12ನೇ ಸಾಲಿಗೆ ಶುಲ್ಕ ಮರುಪಾವತಿ ಕಾರ್ಯಕ್ರಮಕ್ಕೆ ಬಿಡುಗಡೆಗೊಳಿಸಿರುವ, ಖರ್ಚು ಭರಿಸಿರುವ ಜಿಲ್ಲಾವಾರು ಅನುದಾನ ವಿವರ ಅನುಬಂಧ–2 ರಲ್ಲಿ ತಯಾರಿಸಿ ಲಗತ್ತಿಸಿದೆ.

(ii) 2010–11 ಹಾಗೂ 2011–12ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ/ ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನ/ ರಾಜ್ಯ ಸರ್ಕಾರದ ಮೆಟ್ರಿಕ್ ಪೂರ್ವ

ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮಕ್ಕೆ ಒದಗಿಸಲಾಗಿರುವ ಜಿಲ್ಲಾವಾರು ಅನುದಾನದ ವಿವರ ಕ್ರಮವಾಗು ಅನುಬಂಧ 3 ಮತ್ತು 4 ರಲ್ಲಿ ತಯಾರಿಸಿ ಲಗತ್ತಿಸಿದೆ.

ಇ) ವಿದ್ಯಾರ್ಥಿ ವೇತನ ಸೌಲಭ್ಯ ಪಡೆಯಲು ಈ ಕೆಳಕಂಡ ಮಾರ್ಗಸೂಚಿ ಮಾನದಂಡಗಳನ್ನು ಹಾಗೂ ಆದಾಯ ಮಿತಿಗಳನ್ನು ನಿಗಜುಪಡಿಸಿದೆ.

ಕ್ರ ಸಂ.	ಕಾರ್ಯಕ್ರಮಗಳು	ನಿಗದಿಪಡಿಸಿರುವ ಮಾನದಂಡಗಳು
I(a)	ಕೇಂದ್ರ ಪುರಸ್ಕೃತ ಮೆ.ಪೂ.ವಿ. ವೇತನ	1ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ರೂ. 44,500–00 ಗಳ ಮಿತಿಯಲ್ಲಿರಬೇಕು.
(b)	ಕೇಂದ್ರ ಪುರಸ್ಕೃತ ಮೆ.ನಂ.ವಿ. ವೇತನ	ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ರೂ. 1.00 ಲಕ್ಷಗಳ ಮಿತಿಯಲ್ಲಿರಬೇಕು.
(c)	ರಾಜ್ಯ ಸರ್ಕಾರದ ಮೆಟ್ರಿಕ್‌ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ	ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ರೂ. 15,000 ಮಿತಿಯಲ್ಲಿರಬೇಕು.
(II)	ಶುಲ್ಕ ಮರುಪಾವತಿ:	ಶುಲ್ಕ ಮರುಪಾವತಿ ಸೌಲಭ್ಯ ಪಡೆಯಲು ಕೆಳಕಂಡ ಮಾರ್ಗಸೂಚಿ ಮಾನದಂಡಗಳು ಹಾಗೂ ಆದಾಯ ಮಿತಿಯನ್ನು ನಿಗದಿಪಡಿಸಿದೆ: ರೂ. 11,000/– ಗಳ ವಾರ್ಷಿಕ ಆದಾಯದ ಮಿತಿಯಲ್ಲಿರುವ ಇತರೆ ಎಲ್ಲಾ ವಿದ್ಯಾರ್ಥಿಗಳಿಗೆ ಈ ಸೌಲಭ್ಯವನ್ನು ನೀಡಲಾಗುವುದು ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಜಾತಿ ಮತ್ತು ಧರ್ಮ ಪರಿಗಣಿಸದೇ ಆದಾಯ ಮಿತಿ ಇರುವುದಿಲ್ಲ. ಸರ್ಕಾರದಿಂದ ಅನುಮೋದಿತವಾದ ಬೋಧನಾ ಶುಲ್ಕ, ಪ್ರಯೋಗಾಲಯದ ಶುಲ್ಕ ಮತ್ತು ಪರೀಕ್ಷಾ

		ಶುಲ್ಕವನ್ನು ಮರುವಪಾವತಿ ಮಾಡಲಾಗುವುದು. ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಮೇಲೆ ತಿಳಿಸಿರುವ ಶುಲ್ಕದ ಜೊತೆಗೆ ಸರ್ಕಾರ ನಿಗದಿಪಡಿಸಿರುವ ಇತರೆ ಎಲ್ಲಾ ಶುಲ್ಕಗಳಿಂದ ಶುಲ್ಕವನ್ನು ಮರುಪಾವತಿ ಮಾಡಲಾಗುವುದು. ರಾಜ್ಯದ ಎಲ್ಲಾ ಶಾಲಾ/ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 10ನೇ ತರಗತಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಮರುಪಾವತಿ ಮಾಡಲಾಗುವುದು. ಉಳಿದಂತೆ ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ/ ಅನುದಾನ ರಹಿತ ಎಲ್ಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ (ಸರ್ಕಾರಿ ಕಾಲೇಜುಗಳನ್ನು ಹೊರತುಪಡಿಸಿ) ಶುಲ್ಕವನ್ನು ಮರುಪಾವತಿ ಮಾಡಲಾಗುವುದು. ಕ್ಯಾಪಿಟೇಷನ್ ಫೀ ಪಾವತಿ ಮಾಡಿ ವಿದ್ಯಾರ್ಥಿಗಳು ಶುಲ್ಕ ಮರುಪಾವತಿಗೆ ಅರ್ಹರಿರುವುದಿಲ್ಲ.
(III)	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು, ವಿದ್ಯಾರ್ಥಿವೇತನ ಶುಲ್ಕ ಮರುಪಾವತಿ ಸೌಲಭ್ಯ ಪಡೆಯಲು ಸರ್ಕಾರದ ಆಧಿಸೂಚನೆ ಪತ್ರ ಸಂಖ್ಯೆ: ಎಸ್.ಡಬ್ಲ್ಯೂಡಿ. 3 ಎಸ್.ಟಿ.ಸಿ. 2002, ದಿನಾಂಕ 11.03.2002 ರಲ್ಲಿ ಜಾತಿ ಆದಾಯ ಪ್ರಮಾಣ ಪತ್ರದ ಅವಧಿಯು ಪ್ರಮಾಣ ಪತ್ರ ನೀಡಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ. ಈ ಸಂಬಂಧ ಸುತ್ತೋಲೆಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿಗಳು, ರಾಜ್ಯದ ಎಲ್ಲಾ ಶಾಲೆ/ ಕಾಲೇಜುಗಳ ಮುಖ್ಯಸ್ಥರುಗಳಿಗೆ ತಿಳಿಸಲಾಗಿದೆ	

ಈ) ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಉ) ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದೇಶಿ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡಲು ಬಡ್ಡಿರಹಿತ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.

ಸರ್ಕಾರದ ಆದೇಶದನ್ವಯ ಈ ಯೋಜನೆಯಲ್ಲಿ ಸೌಲಭ್ಯ ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸಲು ಅಂಕಗಳ ಮಿತಿಯನ್ನು ಶೇ.

60ಕ್ಕೆ ನಿಗದಿ ಪಡಿಸಲಾಗಿರುತ್ತದೆ. ಅಂಕಗಳ ಮಿತಿಯನ್ನು ಸಡಿಲಗೊಳಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಊ) ಈ ಯೋಜನೆಯಲ್ಲಿ ಬಡ್ಡಿ ರಹಿತ ಸಾಲ ಪಡೆದು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪೂರ್ಣ ವಿವರಗಳನ್ನು ಅನುಬಂಧ–05 ರಲ್ಲಿ ಸಲ್ಲಿಸಿದೆ.

ಈ ಯೋಜನೆಯಲ್ಲಿ ಆಯ್ಕೆ ಮಾಡುವ ಪ್ರಕ್ರಿಯೆಗಳು

1. ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.
2. ವಿದ್ಯಾರ್ಥಿಗಳು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕೇಂದ್ರ ಅಥವಾ ಜಿಲ್ಲಾ ಕಚೇರಿಗೆ ಅರ್ಜಿ ಸಲ್ಲಿಸಬಹುದು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯ ಆಯ್ಕೆ ಸಮಿತಿಯು ಅಂತಿಮವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡುತ್ತದೆ.

ಮಾನದಂಡಗಳು

1. ಅಭ್ಯರ್ಥಿಗಳು ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ ಮತ್ತು 3ಎ, 3ಬಿಗೆ ಸೇರಿದವರಾಗಿರಬೇಕು.
2. ವಿದೇಶ ವಿಶ್ವವಿದ್ಯಾಲಯಗಳಲ್ಲಿ ಮಾಸ್ಟರ್ ಡಿಗ್ರಿ/ ಪಿ.ಹೆಚ್.ಡಿ/ ಪೋಸ್ಟ್ ಡಾಕ್ಟರ್‌ಲ್ ವ್ಯಾಸಂಗಕ್ಕೆ ಪ್ರವೇಶ ಪಡೆದಿರಬೇಕು.
3. ಕನಿಷ್ಠ ಅಂಕಗಳ ಮಿತಿ ಶೇ. 60 ಇರಬೇಕು.
4. ಅಭ್ಯರ್ಥಿಯ ಕುಟುಂಬದ ಮಾಸಿಕ ಆದಾಯ ರೂ. 12,000/– ಗಳ ಒಳಗಿರಬೇಕು. ವ್ಯಾಸಂಗ ಮಾಡುವ ಕೋರ್ಸಿನ ವಿಷಯ ಸರ್ಕಾರದ ಆದೇಶ ಸಂಖ್ಯೆ:SWD220/BMS/2005 ದಿನಾಂಕ 07.11.2005 ರಲ್ಲಿಯ ಅನುಮೋದಿತ ಪಟ್ಟಿಯಲ್ಲಿರಬೇಕು.

ಅನುಬಂಧ–01

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ವಿವರ

ಕ್ರ ಸಂ.	ಕೋರ್ಸಿನ ಹೆಸರು	ಪ್ರವರ್ಗ–1ರ ವಿದ್ಯಾರ್ಥಿಗಳಿಗೆ	ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ
1	2	3	4
1	ಎಸ್.ಎಸ್.ಎಲ್.ಸಿ. (ಪರೀಕ್ಷಾ ಶುಲ್ಕ)	275	275
2	1 ಪಿಯುಸಿ ವಿಜ್ಞಾನ	900	70
3	2 ಪಿಯುಸಿ ವಿಜ್ಞಾನ	1122	952
4	1 ಪಿಯುಸಿ ಕಲಾ/ ವಾಣಿಜ್ಯ	620	420
5	2 ಪಿಯುಸಿ ಕಲಾ/ ವಾಣಿಜ್ಯ	842	672
6	1 ಬಿಎ/ ಬಿಕಾಂ/ ಬಿಬಿಎಂ	1123	857
7	2 ಮತ್ತು ಬಿಎ/ ಬಿಕಾಂ/ ಬಿಬಿಎಂ	1123	857
8	1 ಬಿಎಸ್‌ಸಿ	1360	1094
9	2 ಮತ್ತು 3 ಬಿಎಸ್‌ಸಿ	1360	1094
10	ಡಿ.ಎ.ಡಿ (ಟಿ.ಸಿ.ಹೆಚ್) ಕಲಾ	1725	1000
11	ಡಿ.ಎ.ಡಿ (ಟಿ.ಸಿ.ಹೆಚ್) ವಿಜ್ಞಾನ	1925	1200
12	ಬಿ.ಇ.	16195	16000
13	ಎಂ.ಬಿ.ಬಿ.ಎಸ್	13000	10700
14	ಬಿ.ಡಿ.ಎಸ್.	10700	8400
15	1 ಬಿಎಸ್‌ಸಿ ಕೃಷಿ ಬಿಟೆಕ್ (ತಾಂತ್ರಿಕ)	7180	5430
16	2,3,4 ನೇ ಬಿಎಸ್‌ಸಿ (ಕೃಷಿ) ಬಿಟೆಕ್ (ತಾಂತ್ರಿಕ)	6530	5510
17	1 ಪಿ.ಹೆಚ್.ಡಿ. ಕೃಷಿ	8325	5455
18	2 ಪಿ.ಹೆಚ್.ಡಿ. ಕೃಷಿ	7600	5475
19	3 ಪಿ.ಹೆಚ್.ಡಿ. ಕೃಷಿ	7600	5475
20	ಕಿರಿಯ ಎಂ.ಎಸ್.ಸಿ. ಕೃಷಿ ಎಂಟೆಕ್, ರೇಷ್ಮೆ	8325	5455
21	ಹಿರಿಯ ಎಂ.ಎಸ್.ಸಿ. ಎಂಟೆಕ್, ರೇಷ್ಮೆ	7530	5405
22	1 ಎಂ.ಬಿ.ಎ (ಕೃಷಿ)	48325	45455
23	2 ಎಂ.ಬಿ.ಎ (ಕೃಷಿ)	47530	45405
24	ಎಂ.ಎಸ್.ಡಬ್ಲ್ಯೂ	1100	1100
25	ಎಂ.ಎಸ್.ಡಬ್ಲ್ಯೂ ಬಯೋ ಕೆಮಿಸ್ಟ್ರಿ	500	500
26	ಎಂ.ಎಸ್.ಡಬ್ಲ್ಯೂ ಬಯೋ ಟೆಕ್ನಾಲಜಿ	1895	1895
27	ಎಂ.ಎಸ್.ಡಬ್ಲ್ಯೂ ಮೈಕ್ರೊ ಬಯೋಲಜಿ	1895	1895
28	ಎಂ.ಇ.	1100	1100
29	ಮಾಸ್ಟರ್ ಆಫ್ ಲಾ	2220	2220
30	ಎಂಎಸ್ಸಿ ಇಲೆಕ್ಟ್ರನಿಕ್ ಮಿಡಿಯಾ	26620	26620
31	ಎಂ.ಎಸ್ಸಿ ಮೈಕ್ರೊ ಬಯೋಲಜಿ	74700	74700
32	ಎಂ.ಎಫ್.ಎ.	32615	32615
33	ಎಂ.ಐ.ಬಿ.	35110	35110
34	ಎಂ.ಟಿ.ಬಿ.	29920	29920
35	ಎಂ.ಬಿ.ಎ.	80000	8000
36	ಎಂ.ಸಿ.ಎ.	4750	4750
37	ಪಿ.ಜಿ. ಡಿಪ್ಲೋಮಾ	1210	1210
38	ಬಿ.ಎಡ್.	3180	3585
39	ಡಿಪ್ಲೋಮಾ	1700	2500

ಅನುಬಂಧ–02

2010–11 ಮತ್ತು 2011–12ನೇ ಸಾಲಿನಲ್ಲಿ ಶುಲ್ಕ ಮರುಪಾವತಿಗೆ ಬಿಡುಗಡೆಯಾದ ಅನುದಾನ ಮತ್ತು ಖರ್ಚಾದ ವಿವರ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	2010–11		2011–12	
		ಬಿಡುಗಡೆಯಾದ ಅನುದಾನ	ಖರ್ಚು	ಬಿಡುಗಡೆಯಾದ ಅನುದಾನ	ಖರ್ಚು
1	ಬೆಂಗಳೂರು	690.00	690.00	476.00	476.00
2	ಬೆಂಗಳೂರು	52.00	52.00	35.00	35.00
3	ಚಿಕ್ಕಬಳ್ಳಾಪುರ	46.00	46.00	28.00	28.00
4	ಚಿತ್ರದುರ್ಗ	54.00	54.00	70.00	70.00
5	ದಾವಣಗೆರೆ	241.00	241.00	181.00	181.00
6	ಕೋಲಾರ	64.63	64.63	35.00	35.00
7	ರಾಮನಗರ	59.00	59.00	28.00	28.00
8	ಶಿವಮೊಗ್ಗ	262.00	262.00	182.00	182.00
9	ತುಮಕೂರು	244.00	244.00	140.00	140.00
10	ಬಾಗಲಕೋಟೆ	97.00	97.00	126.00	126.00
11	ಬಿಜಾಪುರ	137.00	137.00	168.00	168.00
12	ಬೆಳಗಾವಿ	186.00	186.00	238.00	238.00
13	ಧಾರವಾಡ	126.00	126.00	118.00	118.00
14	ಗದಗ	81.00	81.00	74.00	74.00
15	ಹಾವೇರಿ	62.00	62.00	70.00	70.00
16	ಉತ್ತರ ಕನ್ನಡ	60.00	60.00	84.00	84.00
17	ಬಳ್ಳಾರಿ	161.00	161.00	140.00	140.00
18	ಬೀದರ್	77.85	77.85	140.00	140.00
19	ಗುಲ್ಬರ್ಗಾ	316.00	316.00	210.00	210.00
20	ಕೊಪ್ಪಳ	45.00	45.00	49.00	49.00
21	ರಾಯಚೂರು	97.00	97.00	56.00	56.00
22	ಯಾದಗಿರಿ	20.00	20.00	28.00	28.00
23	ಚಾಮರಾಜನಗರ	51.00	51.00	42.00	42.00
24	ಚಿಕ್ಕಮಗಳೂರು	67.00	67.00	56.00	56.00
25	ದಕ್ಷಿಣ ಕನ್ನಡ	195.00	195.00	104.00	104.00
26	ಹಾಸನ	163.00	163.00	140.00	140.00
27	ಕೊಡಗು	25.00	25.00	20.00	20.00
28	ಮಂಡ್ಯ	213.00	213.00	140.00	140.00
29	ಮೈಸೂರು	182.40	182.40	252.00	252.00
30	ಉಡುಪಿ	46.42	46.42	70.00	70.00
	ಒಟ್ಟು	**4121.30**	**4121.30**	**3500.00**	**3500.00**

ಅನುಬಂಧ–03

2010–11 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಹಾಗೂ ರಾಜ್ಯ ಸರ್ಕಾರದ ವಿದ್ಯಾರ್ಥಿವೇತನ ಖರ್ಚಾದ ವಿವರ.

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಕೇಂದ್ರ ಪುರಸ್ಕೃತ ವಿದ್ಯಾರ್ಥಿವೇತನ		ರಾಜ್ಯ ಸರ್ಕಾರದ ವಿದ್ಯಾರ್ಥಿವೇತನ	
		ಮೆ.ಪೂ. ವಿ.ವೇ	ಮೆ.ನಂ.ವಿ.ವೇ	ಮೆ.ಪೂ. ವಿ.ವೇ	ಮೆ.ನಂ.ವಿ.ವೇ
1	ಬೆಂಗಳೂರು	10.79	95.85	24.75	131.39
2	ಬೆಂಗಳೂರು	1.69	11.45	14.85	27.99
3	ಚಿಕ್ಕಬಳ್ಳಾಪುರ	2.19	23.92	15.00	41.11
4	ಚಿತ್ರದುರ್ಗ	2.73	26.86	31.00	60.59
5	ದಾವಣಗೆರೆ	3.09	33.92	26.18	63.19
6	ಕೋಲಾರ	2.32	21.90	20.82	45.04
7	ರಾಮನಗರ	0.90	19.44	18.25	38.59
8	ಶಿವಮೊಗ್ಗ	3.16	33.54	51.88	88.58
9	ತುಮಕೂರು	5.23	50.43	61.87	117.53
10	ಬಾಗಲಕೋಟೆ	3.36	31.62	29.12	64.10
11	ಬಿಜಾಪುರ	3.55	38.03	37.79	79.37
12	ಬೆಳಗಾವಿ	8.78	81.89	51.54	142.21
13	ಧಾರವಾಡ	3.21	33.55	23.00	59.76
14	ಗದಗ	1.84	21.19	24.12	47.15
15	ಹಾವೇರಿ	2.81	32.28	23.06	58.15
16	ಉತ್ತರ ಕನ್ನಡ	2.68	28.80	40.90	72.38
17	ಬಳ್ಳಾರಿ	2.99	30.72	33.25	66.96
18	ಬೀದರ್	2.28	21.86	42.00	66.14
19	ಗುಲ್ಬರ್ಗಾ	4.14	40.88	42.49	87.51
20	ಕೊಪ್ಪಳ	1.89	23.60	22.25	47.74
21	ರಾಯಚೂರು	2.92	30.23	18.02	51.17
22	ಯಾದಗಿರಿ	1.59	17.72	3.82	23.13
23	ಚಾಮರಾಜನಗರ	1.51	15.84	22.70	40.05
24	ಚಿಕ್ಕಮಗಳೂರು	2.32	22.78	47.82	72.92
25	ದಕ್ಷಿಣ ಕನ್ನಡ	3.45	34.97	16.42	54.84
26	ಹಾಸನ	3.72	34.36	49.65	87.73
27	ಕೊಡಗು	1.12	10.12	16.00	27.24
28	ಮಂಡ್ಯ	4.06	41.61	39.58	85.25
29	ಮೈಸೂರು	5.04	49.47	40.80	95.31
30	ಉಡುಪಿ	2.12	24.51	20.90	47.53
	ಒಟ್ಟು	**97.48**	**983.34**	**909.83**	**1990.65**

ಅನುಬಂಧ–04

2011–12 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಹಾಗೂ ರಾಜ್ಯ ಸರ್ಕಾರದ ವಿದ್ಯಾರ್ಥಿವೇತನ ಖರ್ಚಾದ ವಿವರ.

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಕೇಂದ್ರ ಪುರಸ್ಕೃತ ವಿದ್ಯಾರ್ಥಿವೇತನ		ರಾಜ್ಯ ಸರ್ಕಾರದ ವಿದ್ಯಾರ್ಥಿವೇತನ	
		ಮೆ.ಪೂ. ವಿ.ವೇ	ಮೆ.ನಂ.ವಿ.ವೇ	ಮೆ.ಪೂ. ವಿ.ವೇ	ಮೆ.ನಂ.ವಿ.ವೇ
1	ಬೆಂಗಳೂರು	12.36	92.76	25.63	130.75
2	ಬೆಂಗಳೂರು	1.06	12.09	15.75	28.90
3	ಚಿಕ್ಕಬಳ್ಳಾಪುರ	2.20	16.38	15.40	33.98
4	ಚಿತ್ರದುರ್ಗ	2.88	21.54	32.24	56.66
5	ದಾವಣಗೆರೆ	3.40	25.41	27.20	56.01
6	ಕೋಲಾರ	2.64	6.56	21.25	30.45
7	ರಾಮನಗರ	1.96	14.61	18.70	35.27
8	ಶಿವಮೊಗ್ಗ	3.12	23.31	52.96	79.39
9	ತುಮಕೂರು	4.88	36.69	63.34	104.91
10	ಬಾಗಲಕೋಟೆ	3.12	23.43	34.68	61.23
11	ಬಿಜಾಪುರ	3.40	25.65	38.49	67.54
12	ಬೆಳಗಾವಿ	7.96	59.82	49.60	117.38
13	ಧಾರವಾಡ	3.04	22.77	24.76	50.57
14	ಗದಗ	1.84	13.80	25.72	41.36
15	ಹಾವೇರಿ	2.72	20.43	23.84	46.99
16	ಉತ್ತರ ಕನ್ನಡ	2.56	19.20	41.90	63.66
17	ಬಳ್ಳಾರಿ	3.84	28.77	34.58	67.19
18	ಬೀದರ್	2.84	21.33	41.80	65.97
19	ಗುಲ್ಬರ್ಗಾ	4.12	30.87	34.94	69.93
20	ಕೊಪ್ಪಳ	2.28	16.98	27.54	46.80
21	ರಾಯಚೂರು	3.16	23.70	20.94	47.80
22	ಯಾದಗಿರಿ	1.76	13.53	12.66	27.95
23	ಚಾಮರಾಜನಗರ	1.84	13.71	23.21	38.76
24	ಚಿಕ್ಕಮಗಳೂರು	2.70	16.20	52.25	71.15
25	ದಕ್ಷಿಣ ಕನ್ನಡ	3.60	26.94	17.02	47.56
26	ಹಾಸನ	3.24	24.42	65.64	93.30
27	ಕೊಡಗು	1.04	7.71	16.64	25.39
28	ಮಂಡ್ಯ	3.32	25.02	43.68	72.02
29	ಮೈಸೂರು	5.00	37.47	41.63	84.10
30	ಉಡುಪಿ	2.12	15.78	21.46	39.36
	ಒಟ್ಟು	**100.00**	**736.88**	**965.45**	**1802.33**

ಅನುಬಂಧ–05

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಬಡ್ಡಿರಹಿತ ಸಾಲ ಮಂಜೂರು ಮಾಡಿರುವ ಜಿಲ್ಲಾವಾರು ವಿವರ (2009–10)

(ರೂ. ಲಕ್ಷಗಳಲ್ಲಿ)

ಕ್ರ ಸಂ.	ವಿದ್ಯಾರ್ಥಿಗಳ ಹೆಸರು	ಜಾತಿ & ಪ್ರವರ್ಗ	ವ್ಯಾಸಂಗದ ಕೋರ್ಸ್	ವಿಶ್ವ ವಿದ್ಯಾಲಯದ ಹೆಸರು	ಮಂಜೂರು ಮಾಡಿದ ಬಡ್ಡಿ ರಹಿತ ಸಾಲದ ಮೊತ್ತ
ಬೆಂಗಳೂರು ನಗರ ಜಿಲ್ಲೆ					
1.	ಅಬ್ದುಲ್ ಹನ್ನಾನ್ ಮುತಾಹಿರ್ ಬಿನ್ ಅಬ್ದುಲ್ ಖಾದರ್, ನಂ:22, 1ನೇ ಕ್ರಾಸ್, ಪಾಪಣ್ಣ ಬ್ಲಾಕ್, ಗಂಗಾನಗರ, ಬೆಂಗಳೂರು–560032.	ಮುಸ್ಲಿಂ 2ಬಿ	MS in Electrical Engineering Electronics Communication	North western Polytechnic University Fremount California USA	7.00
2.	ರಂಜಿತ್ ಕುಮಾರ್ ಎಸ್ ಬಿನ್ ಶಿವಕುಮಾರ ಎಂ, ನಂ. 230/8, 1ನೇ ಮಹಡಿ, 8ನೇ ಕ್ರಾಸ್, 3ನೇ ಮೇನ್, ವೆಂಕಟಾಪುರ, ಕೋರಮಂಗಲ 1ನೇ ಬ್ಲಾಕ್, ಬೆಂಗಳೂರು 34.	ಉಪ್ಪಾರ 1	MD Physical (Medical)	Tver state metal academy of the Federal Agency for community Health and Social Development (SEI HPE Tver SMA of Roszdrav) Russia)	7.00
3.	ಅಭಿಜಿತ್ ಆನಂದ ಬಿನ್ ಎಸ್.ಅಭಿಜಿತ್ ಆನಂದ್, ನಂ. 12/85–5, ರತ್ನ ವಿಲಾಸ್ ರಸ್ತೆ (ಪೂರ್ವ), ಬಸವನಗುಡಿ, ಬೆಂಗಳೂರು–560004.	ಲಿಂಗಾಯಿತ 3ಬಿ	MS in Information & Communication Technology	University of Wollonging Sydney, Australia.	3.50
ಕೊಡಗು ಜಿಲ್ಲೆ					
4	ನಿಕ್ಕಿ ನಾಚಪ್ಪ ವಿನ್ ಸಿ.ಸಿ.ಗಣಪತಿ, ಪ್ರಶಾಂತ ನಿಲಯ, ಕೊಡಗು ವಿದ್ಯಾಲಯದ ಹತ್ತಿರ, ಸಿದ್ದಾಪುರ ರಸ್ತೆ, ಸಿ.ಜಿ. ಮಡಿಕೇರಿ, ಕೊಡಗು ಜಿಲ್ಲೆ.	ಕೊಡವರು ಕೊಡವ 3ಎ	MS in AeroSpace Aeronautical & Astronacetic	University of Florida International Center, Gainesville, FL 32611, USA	10.00